739 (1219) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದ ರೈತರಿಗೆ ಸರ್ಕಾರ ಅನೇಕ ಜನಪರ ಯೋಜನೆಗಳಡಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಕೃಷಿ ಚಟುವಟಿಕೆಗೆ ಬೇರೆಯವರ ಕೆರೆಗಳಿಂದ ಅಥವಾ ದೂರದ ಕೆರೆಗಳಿಂದ ನೀರೆತ್ತಲು ಸೀಮೆಎಣ್ಣೆ ಚಾಲಿತ ವಿಲೆಯರ್ಸ್ ಪಂಪ್‌ಗಳಿಗೆ ಸಬ್ಸಿಡಿ ದರದಲ್ಲಿ ಸೀಮೆಎಣ್ಣೆ ಒದಗಿಸಲಾಗುವುದೆ ,

(ಆ) ಮೀನುಗಾರಿಕೆಗೆ ಸಬ್ಸಿಡಿ ದರದಲ್ಲಿ ಸೀಮೆಎಣ್ಣೆ ಮತ್ತು ಡೀಸೆಲ್ ಒದಗಿಸುವ ರೀತಿ ಬಡ ರೈತರಿಗೆ ಸಬ್ಸಿಡಿ ದರದಲ್ಲಿ ಸೀಮೆಎಣ್ಣೆಯನ್ನು ನೀಡದಿರಲು ಕಾರಣವೇನು ,

(ಇ) ಸಬ್ಸಿಡಿ ದರದಲ್ಲೆ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಸೀಮೆಎಣ್ಣೆ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ, ರೈತರಿಗೆ ಮತ್ತು ಮೀನುಗಾರಿಕೆಗೆ ಪ್ರತ್ಯೇಕ ನೀತಿಯನ್ನು ಅನುಸರಿಸಲು ಕಾರಣವೇನು , ತಾರತಮ್ಯವನ್ನು ಹೋಗಲಾಡಿಸಲು ಸರ್ಕಾರದ ಕ್ರಮವೇನು ?

ಶ್ರೀ ಗೋವಿಂದ ಎಂ ಕಾರ್ಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) –

(ಅ) ಇಲ್ಲ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಸಾರ್ವಜನಿಕ ವಿತರಣಾ ಪದ್ಧತಿ (ಪಿಡಿಎಸ್)ಯಡಿ ವಿತರಿಸಲು ಮಾತ್ರ ಸೀಮೆಎಣ್ಣೆಯನ್ನು ನೀಡುತ್ತಿದ್ದು, ಇತರೆ ಉದ್ದೇಶಗಳಿಗೆ ನೀಡಲು ಸೀಮೆಎಣ್ಣೆ ಹಂಚಿಕೆ ಇರುವುದಿಲ್ಲ

(ಆ) ನಾಡದೋಣಿಗಳ ಮೀನುಗಾರರಿಗೆ ಈಗ ನೀಡುತ್ತಿರುವ ತಲಾ 200 ಲೀಟರ್‌ಗಳ ಸೀಮೆಎಣ್ಣೆ ಪಿಡಿಎಸ್ ಅಡಿಯದಾಗಿದ್ದು, ಹೆಚ್ಚುವರಿ 200 ಲೀಟರ್ ಸೀಮೆಎಣ್ಣೆಯನ್ನು ಮೀನುಗಾರರು ತಮ್ಮ ಹೆಚ್ಚುವರಿ ಬೇಡಿಕೆಗಾಗಿ ಮುಕ್ತ ಮಾರುಕಟ್ಟೆಯಿಂದ ಸೀಮೆಎಣ್ಣೆಯನ್ನು ಖರೀದಿಸಿ ಸರ್ಕಾರ ನೀಡುವ ಸಹಾಯಧನವನ್ನು ಪಡೆಯುತ್ತಾರೆ ರೈತರ ನೀರಾವರಿ ಪಂಪ್‌ಗಳಿಗೆ ಸರ್ಕಾರವು ಪ್ರತ್ಯೇಕ ನೀತಿಯನ್ನು ರೂಪಿಸಿರುವುದರಿಂದ ವ್ಯವಸಾಯಕ್ಕಾಗಿ ರೈತರಿಗೆ ಸೀಮೆಎಣ್ಣೆ ನೀಡಲು ಸಾಧ್ಯವಿರುವುದಿಲ್ಲ

(ಇ) ರೈತರಿಗೆ ನೀರಾವರಿ ಉದ್ದೇಶಗಳಿಗೆ ಸೀಮೆಎಣ್ಣೆ ನೀಡುವ ಯೋಜನೆ ಸರ್ಕಾರದ ಮುಂದಿರುವುದಿಲ್ಲ ನೀರಾವರಿಗಾಗಿ ಪ್ರತ್ಯೇಕ ಯೋಜನೆಗಳಿರುತ್ತದೆ ರೈತರಿಗೆ ಮತ್ತು ಮೀನುಗಾರರಿಗೆ ಪ್ರತ್ಯೇಕ ನೀತಿಯನ್ನು ಅನುಸರಿಸುತ್ತಿಲ್ಲ ರೈತರಿಗೆ ಸಹ ಸಾರ್ವಜನಿಕ ವಿತರಣಾ ಪದ್ದತಿಯಡಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಮಾಹೆಯಾನ ತಲಾ 4 ಲೀಟರ್‌ನಂತೆ ಸೀಮೆಎಣ್ಣೆ ನೀಡಲಾಗುತ್ತಿದೆ

740 (1220) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –